ಅಸಲು ದಾವೆ ನಂಃ 1/2020 ಪಿ.ಡಬ್ಲ್ಯೂಃ5- ಮಲ್ಲಪ್ಪ ತುಪ್ಪದ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ21/03/2024 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ PKU ವಕೀಲರಿಂದ**

1. ನನಗೆ ಮೆಣಸಗಿ ಗ್ರಾಮದಲ್ಲಿ ಜಮೀನು ಇದೆ. ಅದರ ಸರ್ವೆ ನಂ.48/3 ಇರುತ್ತದೆ. ನನ್ನ ಜಮೀನಿನ ಪೂರ್ವಕ್ಕೆಃ 53/1 ಜಮೀನು ಬರುತ್ತದೆ. ನನ್ನ ಜಮೀನು ಉತ್ತರ-ದಕ್ಷಿಣಕ್ಕೆ ಇದೆ. ನನ್ನ ಜಮೀನಿಗೆ ಲಗತ್ತಾಗಿ ಸರ್ವೆ ನಂ.53/1 ರ ಎರಡು ಜಮೀನುಗಳು ಬರುತ್ತವೆ. ಅದರಲ್ಲಿ ಉತ್ತರಕ್ಕೆ ಗಣಪ್ಪ ಯಾವಗಲ್ ದಕ್ಷಿಣಕ್ಕೆ ಸಂಗಪ್ಪ ಬೆಡಸೂರು ಇದ್ದಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ಸಂಗಪ್ಪ ಬೆಡಸೂರು ಇವರಿಗೆ ಪಿತ್ರಾರ್ಜಿತವಾಗಿ ಬಂದಿತು ಎಂದರೆ ನನಗೆ ಗೊತ್ತಿಲ್ಲ. ಆದರೆ ಸದರಿ ಜಮೀನನ್ನು ಸಂಗಪ್ಪ ಬೆಡಸೂರು ಇವರು ಬಸಪ್ಪ ಕಳ್ಳಿಮನಿ ಇವರಿಗೆ ಮಾರಾಟ ಮಾಡಿದ್ದರು. ಬಸಪ್ಪ ಕಳ್ಳಿಮನಿ ಗಣಪತಿ ಯಾವಗಲ್ ಇವರಿಗೆ ಆ ಜಮೀನನ್ನು ಮಾರಾಟ ಮಾಡಿದ್ದರು. ಮಾರಾಟ ಆದ ದಿನಾಂಕ ನನಗೆ ಗೊತ್ತಿಲ್ಲ. ಸಂಗಪ್ಪ ಬೆಡಸೂರು ಇವರಿಗೆ ಈಶ್ವರಪ್ಪ ಮತ್ತು ಬಸವರಾಜಪ್ಪ ಇಬ್ಬರು ಮಕ್ಕಳು ಎಂದರೆ ನಿಜ. ಸದರಿ ದಾವಾ ಜಮೀನನ್ನು ಈಶ್ವರಪ್ಪ ಮತ್ತು ಬಸವರಾಜಪ್ಪ ಮತ್ತು ಸಂಗಪ್ಪ ಸಾಮೂಹಿಕವಾಗಿ ಕಬ್ಜಾ ವಹಿವಾಟು ಮಾಡುತ್ತಾ ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸಂಗಪ್ಪ ಒಬ್ಬರೇ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಸದರಿ ಖರೀದಿ ವ್ಯವಹಾರದಲ್ಲಿ ನಾನು ಭಾಗಿಯಾಗಿರಲಿಲ್ಲ. ಆ ಖರೀದಿ ಪತ್ರವನ್ನು ನಾನು ನೋಡಿಲ್ಲ. ನಾನು ಖರೀದಿಗೆ ಕೊಟ್ಟಿದ್ದಾರೆ ಎಂದು ಗಣಪತಿ ಯಾವಗಲ್ ಮತ್ತು ಬಸವರಾಜ ಯಾವಗಲ್ ಇವರ ಮಾತು ಕೇಳಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಸದರಿ ಜಮೀನು ಈಗಲೂ ಸಹ ಈಶ್ವರಪ್ಪ ಮತ್ತು ಬಸವರಾಜಪ್ಪ ಮತ್ತು ಸಂಗಪ್ಪ ಸಾಮೂಹಿಕವಾಗಿ ಕಬ್ಜಾ ವಹಿವಾಟು ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಈ ರೀತಿ ಗಣಪತಿ ಯಾವಗಲ್ ಮತ್ತು ಬಸವರಾಜ ಯಾವಗಲ್ ಇವರ ಮಾತು ಕೇಳಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಕೂಡಿದ ಎಲ್ಲ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**